ಅ3

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರು ಮಂಡಿಸಿರುವ ನಿಯಮ 72ರ ಸೂಚನೆಗೆ ಉತ್ತರ

**ಸೂಚನೆ**: ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರತಿ ವರ್ಷದ ವಾಡಿಕೆಯಂತೆ ತೊಗರಿ, ಹೆಸರು, ಬರಗು, ಲವಣೆ ಇನ್ನಿತರ ಬೆಳೆಗಳನ್ನು ಬೆಳೆಯುವಂಥ ರೈತರು ಮಳೆ ಇಲ್ಲದೆ ಕಂಗಾಲಾಗಿದ್ದು, ಮಳೆ ಬರುವಂಥ ಸೂಚನೆಗಳು ಇಲ್ಲದಿರುವುದರಿಂದ ಈ ಭಾಗವನ್ನು ಬರಗಾಲಪೀಡಿತ ಪ್ರದೇಶವೆಂದು ಘೋಷಣೆ ಮಾಡುವುದರ ಮೂಲಕ ಪ್ರತಿ ಎಕರೆಗೆ ಬೆಳೆ ಪರಿಹಾರವನ್ನು ಗೋಷಿಸಬೇಕೆನ್ನುವ ಗಂಭೀರ ವಿಷಯದ ಕುರಿತು ನಿಯಮ 72 ರ ಅಡಿಯಲ್ಲಿ ಮಾನ್ಯ ಕೃಷಿ ಸಚಿವರನ್ನು ಒತ್ತಾಯಿಸುತ್ತೇನೆ.

**ಉತ್ತರ**:-

ಕಲ್ಯಾಣ ಕರ್ನಾಟಕ ಭಾಗದಲ್ಲಿನ ಜಿಲ್ಲೆಗಳಲ್ಲಿ ಮುಂಗಾರು ಅವಧಿಯಲ್ಲಿ (1ನೇ ಜೂನ್ ರಿಂದ 10ನೇ ಜುಲೈ ವರೆಗೆ) ಆಗಿರುವ ಮಳೆ ವಿವರ ಈ ಕೆಳಕಂಡಂತಿದೆ:-

**Karnataka State Natural Disaster Monitoring Centre**

**Districtwise Rainfall Pattern As on 10-07-2023**

**Large Excess(LE) : ( +60% and above), Excess (E): ( +20 to +59%), Normal (N) : (+19% to -19%), Deficient (D): ( -20 to -59%), Large Deficit (LD) : ( -60 or less %), NR : No Rainfall (-100 %)**

| District | Rainfall June 2023 | | | Last 7 Days Rainfall (4th to 10th July -2023) | | | Southwest-Monsoon Cumulative Rainfall 2023 (1st June to 10th July ) | | |
|---|---|---|---|---|---|---|---|---|---|
| | Normal (mm) | Actual (mm) | %DEP | Normal (mm) | Actual (mm) | %DEP | Normal (mm) | Actual (mm) | %DEP |
| Ballari | 72 | 30 | -58 | 11.0 | 15.7 | 43 | 86 | 54 | -38 |
| Vijayanagar | 81 | 42 | -48 | 16.2 | 27.6 | 70 | 105 | 74 | -30 |
| Koppala | 79 | 40 | -49 | 10.5 | 28.4 | 170 | 93 | 72 | -22 |
| Raichur | 85 | 48 | -44 | 17.5 | 28.5 | 63 | 108 | 81 | -24 |
| Kalaburagi | 107 | 61 | -43 | 28.5 | 27.8 | -2 | 146 | 96 | -34 |
| Yadgir | 99 | 61 | -39 | 23.5 | 30.1 | 28 | 130 | 95 | -27 |
| Bidar | 122 | 75 | -39 | 34.7 | 50.6 | 46 | 172 | 149 | -13 |

ಕಳೆದ ಒಂದು ವಾರದಿಂದ ಉತ್ತರ ಒಳನಾಡಿನಲ್ಲಿ ಮುಂಗಾರು ಚುರುಕಾಗಿದ್ದು, ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗುವ ಸಾಧ್ಯತೆಯಿದೆ.

ಪಶು ಸಂಗೋಪನಾ ಇಲಾಖೆಯು ದಿನಾಂಕ:26.06.2023ರಂದು ನೀಡಿರುವ ಮಾಹಿತಿಯನ್ವಯ ರಾಜ್ಯದಲ್ಲಿ ಇಲ್ಲಿಯವರೆಗೆ 147 ಲಕ್ಷ ಟನ್ ಮೇವು ಲಭ್ಯವಿದ್ದು, ಸರಾಸರಿ 27 ವಾರಗಳ ಬಳಕೆಗೆ ಸಾಕಾಗುತ್ತದೆ ಹಾಗೂ ಯಾವುದೇ ತಾಲ್ಲೂಕಿನಲ್ಲಿ ಮೇವಿನ ಕೊರತೆ ಇರುವುದಿಲ್ಲ.

ರಾಜ್ಯದಲ್ಲಿ ಮುಂಗಾರು ಚುರುಕಾಗಿ ಉತ್ತಮ ಮಳೆ ಬೀಳುತ್ತಿರುವುದರಿಂದ ಮಳೆ ಕೊರತೆ ಪ್ರಮಾಣ ಶೇ.70 ರಿಂದ ಶೇ. 45ಕ್ಕೆ ಇಳಿದು ಪರಿಸ್ಥಿತಿ ಉತ್ತಮಗೊಂಡಿದೆ. ಆದರೂ ಕುಡಿಯುವ ನೀರಿನ ಪರಿಸ್ಥಿತಿ, ಕೃಷಿ/ತೋಟಗಾರಿಕೆ ಹಾಗೂ ಪಶುಸಂಗೋಪನೆ ಚಟುವಟಿಕೆಗಳ ಬಗ್ಗೆ ಅವಲೋಕಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಭಾರತೀಯ ಹವಾಮಾನ ಇಲಾಖೆ ದಿನಾಂಕ: 30-06-2023 ರಂದು ಜುಲೈ ತಿಂಗಳ ಮಳೆ ಮುನ್ಸೂಚನೆ ಪ್ರಕಟಿಸಿರುವ ವರದಿಯನ್ವಯ ಉತ್ತರ ಒಳನಾಡಿನಲ್ಲಿ ವಾಡಿಕೆಯಷ್ಟು ಅಥವಾ ಅಧಿಕ ಮಳೆಯಾಗುವ ಸಾಧ್ಯತೆ ಇದೆ.

ಕೇಂದ್ರ ಸರ್ಕಾರದ ಬರ ಕೈಪಿಡಿ 2016ರನ್ವಯ ಬರ ಪೀಡಿತ ಘೋಷಣೆಗೆ ಕೇವಲ ಮಳೆ ಕೊರತೆಯಷ್ಟೇ ಮಾನದಂಡವಾಗುವುದಿಲ್ಲ, ಬರ ಘೋಷಣೆಗೆ ಅವಶ್ಯವಿರುವ ವಿವಿಧ ಮಾನದಂಡಗಳನ್ನು ಉಸ್ತುವಾರಿ ಮಾಡಲಾಗುತ್ತಿದ್ದು, ಅರ್ಹಗೊಂಡ ನಂತರ ಬರಪೀಡಿತ ತಾಲ್ಲೂಕೆಂದು ಘೋಷಿಸಲಾಗುತ್ತದೆ.

ಪ್ರಸ್ತುತ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲು ಕೊನೆಯ ಪಕ್ಷ ಮುಂಗಾರು ಆರಂಭದಿಂದ 2 ತಿಂಗಳ ಅವಧಿ ಪೂರ್ಣಗೊಳ್ಳಬೇಕು. ಅದರಂತೆ, ಜುಲೈ ಅಂತ್ಯಕ್ಕೆ ಅಥವಾ ಆಗಸ್ಟ್ ಮೊದಲನೇ ವಾರದಲ್ಲಿ ಹವಾಮಾನ ಪರಿಸ್ಥಿತಿಯನುಸಾರ ಬರ ಘೋಷಣೆ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತದೆ.

ಕಂಇ 340 ಟಿಎನ್‌ಆರ್ 2023

(ಕೃಷ್ಣ ಭೈರೇಗೌಡ)
ಕಂದಾಯ ಸಚಿವರು